ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1317 /2023**

| | | | |
|---|---|---|---|
| ಸಾಕ್ಷಿಯ ಹೆಸರು | : ಮಂಜುನಾಥ.ಎ | | ಸಿ.ಡಬ್ಲ್ಯು 5 |
| ತಂದೆಯ ಹೆಸರು | : ಅಜ್ಜಣ್ಣ | | ಪಿ.ಡಬ್ಲ್ಯು 2 |
| ವಯಸ್ಸು | : 37 ವರ್ಷ | | |
| ಉದ್ಯೋಗ | : ಅಬಕಾರಿ ಪೇದೆ | | |
| ವಾಸ ಸ್ಥಳ | : ಚಿಕ್ಕಮಗಳೂರು | | |

ದಿನಾಂಕಃ**13-11-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2019 ರಿಂದ 2025 ರ ಮದ್ಯದಲ್ಲಿ ತರೀಕೆರೆಯಲ್ಲಿ ಅಬಕಾರಿ ಪೇದೆ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 17.04.2023 ರಂದು ಬೆಳಗ್ಗೆ 10.45 ಗಂಟೆ ಸುಮಾರಿಗೆ ನಾನು ಚಾಸ-1 ರವರೊಂದಿಗೆ ತರೀಕೆರೆ ನಗರದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ತರೀಕೆರೆ ನಗರದ ಹಳೆಯ ಸಂತೆ ಮೈದಾನದ ಹತ್ತಿರ ಮೀನು ಮಾರುಕಟ್ಟೆ ರಸ್ತೆಯಲ್ಲಿ ಅಕ್ರಮವಾಗಿ ಒಬ್ಬ ಅಸಾಮಿಯು ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಚಾಸ-1 ಇವರಿಗೆ ಬಂದಿತು. ಆ ಪ್ರಕಾರ ನಾವುಗಳು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಹೋಗಿ ಕಾಯುತ್ತಾ ನಿಂತಿದ್ದೆವು. ರಸ್ತೆಯ ಮಧ್ಯದಲ್ಲಿ ಇಬ್ಬರು ಅಸಾಮಿಗಳನ್ನು ನಮ್ಮ ಜೊತೆ ಚಾಸ-1 ರವರು ಪಂಚರನ್ನಾಗಿ ಕರೆದುಕೊಂಡರು. ಆ ಸಮಯದಲ್ಲಿ ಒಬ್ಬ ಅಸಾಮಿಯು ದ್ವಿಚಕ್ರ ವಾಹನ ಸಂಖ್ಯೆ. ಕೆಎ.18- ಪಿ4079 ಟಿವಿಎಸ್ ಎಕ್ಸೆಲ್ ವಾಹನದ ಮೇಲೆ ಬರುತ್ತಿದ್ದನು. ನಮ್ಮನ್ನು ಮತ್ತು ಇಲಾಖಾ ವಾಹನವನ್ನು ನೋಡಿ ಅಸಾಮಿಯು ತನ್ನ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋದನು. ಆತನನ್ನು ಹಿಡಿಯಲು ಪ್ರಯತ್ನಿಸಿದಾಗ ಆತನು ಸಿಗಲಿಲ್ಲ. ಆತನ ವಾಹನವನ್ನು ಪರಿಶೀಲಿಸಲಾಗಿ, ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಕಂಡು ಬಂದಿದ್ದು, ಅದರಲ್ಲಿ 90 ಎಂ.ಎಲ್.ನ 60 ಜೀನಿಯಸ್ ಪ್ರಿಸ್ಟೇಜ್ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಇದ್ದವು. ಅವುಗಳನ್ನು ಪರಿಶೀಲಿಸಿ ನೋಡಿದಾಗ ಟೆಟ್ರಾ ಪ್ಯಾಕೇಟುಗಳ ಮೇಲೆ ಅಂಟಿಸಿದ್ದ ಭದ್ರಾತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು. ವಾಹನದಲ್ಲಿ ಯಾವುದೇ ರಹದಾರಿ ಇರಲಿಲ್ಲ. ಕಾರಣ ಸದರಿ ಮದ್ಯವನ್ನು ಮತ್ತು ವಾಹನವನ್ನು ಚಾಸ-1 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 10.55 ರಿಂದ 11.40 ರವರೆಗೆ ಪಂಚನಾಮೆಯನ್ನು ಜರುಗಿಸಿ, ಅವರ ವಶಕ್ಕೆ ಪಡೆದುಕೊಂಡರು. ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಅದೇ ರೀತಿ ಮು.ಮಾ ನ್ನು ನೋಡಿ ಕೂಡ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಪಂಚರ ಹೆಸರುಗಳು ನೆನಪಿವೆ. ಅವರನ್ನು ಪಂಚರನ್ನಾಗಿ ಚಾಸ-1 ರವರು ಕರೆದಿದ್ದಾರೆ. ಅವರುಗಳು ನಮ್ಮ ಕಛೇರಿಯ ಖಾಯಂ ಪಂಚರು ಎಂದರೆ ಸರಿಯಲ್ಲ. ಆರೋಪಿಯನ್ನು ಮೊದಲಿಗೆ ಸುಮಾರು 25 ಅಡಿಯಿಂದ ನೋಡಿರಬಹುದು. ಯಾವ ಬಣ್ಣದ ಅಂಗಿಯನ್ನು ಆರೋಪಿ ಆ ದಿನ ಹಾಕಿಕೊಂಡಿದ್ದನು ಎಂದು ನಾನು ಗಮನಿಸಿಲ್ಲ. ಆ ಸಮಯದಲ್ಲಿ ವಿಧಾನ ಸಭಾ ಚುನಾವಣೆಗಳು ಜಾರಿಯಲ್ಲಿದ್ದವು ಎಂದರೆ ಸರಿ. ಸಾಮಾನ್ಯವಾಗಿ ಮದ್ಯದ ಅಂಗಡಿಗಳಲ್ಲಿ ಮು.ಮಾ.1 ರಂತಹ ಚೀಲಗಳು ಮತ್ತು ಖಾಲಿ ಪೌಚುಗಳು ಸಿಗುತ್ತವೆ ಎಂದರೆ ಇರಬಹುದು. ನಾನು ಮೇಲೆ ಹೇಳಿದಂತೆ ಚಾಸ-1 ರವರೊಂದಿಗೆ ಯಾವುದೇ ದಾಳಿಗೆ ಹೋಗಿಲ್ಲ, ಚಾಸ-1 ರವರು ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ, ಮತ್ತು ಅಕ್ರಮ ಎಂದು ಹೇಳಲಾಗುವ ಮದ್ಯವನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚುನಾವಣಾ ಸಮಯ ಆಗಿರುವ ಕಾರಣ ಕಛೇರಿಯ ಅಂಕೆ ಅಂಶಗಳಿಗಾಗಿ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮುದ್ದೆ ಮಾಲಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ **:**</u> ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

**ಸಹಿ/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ